ಓ ಎಸ್ ನಂಃ **398/2019**
ಡಿ.ಡಬ್ಲ್ಯೂ **-6**
ದಿನಾಂಕಃ **02.04.2026.**

<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಲ್ ಎಂ ಹೆಚ್ ವಕೀಲರಿಂದಃ</u>

4 ನೇ ಪ್ರತಿವಾದಿ ನಾವು ಅಣ್ಣ ತಮ್ಮಂದಿರು. ನನಗೆ ವಾದಿ ಗೊತ್ತಿಲ್ಲ. ದಾವಾ ಸ್ವತ್ತು ವಾದಿಯದ್ದು ಆಗಿದ್ದು ತನಗೆ ಮಾರಾಟ ಮಾಡಲಾಗಿರುತ್ತದೆ ಎಂದು ದಾವೆಯನ್ನು ಸಲ್ಲಿಸಲಾಗಿರುತ್ತದೆ. 24 ನೇ ಸರ್ವೇ ನಂಬರ್ ಗೆ ಸಂಬಂಧಿಸಿದಂತೆ ದಾವೆಯನ್ನು ಸಲ್ಲಿಸಲಾಗಿರುತ್ತದೆ. 6 ಎಕರೆಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಲಾಗಿರುತ್ತದೆ. ಅದರ ಚಕ್ಕುಬಂದಿ ಪೂರ್ವಕ್ಕೆ ಮುದ್ರರಂಗಪ್ಪರ ದಾಸಪ್ಪ , ಪಶ್ಚಿಮಕ್ಕೆ ಸಿದ್ದಪ್ಪನ ಜಮೀನು , ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ದನವಿನ ಓಣಿ. ಸರ್ವೇ ನಂ. 24 ಕ್ಕೆ ಸಂಬಂಧಿಸಿದಂತೆ ಮಾತ್ರ ದಾವೆ ಸಲ್ಲಿಸಲಾಗಿರುತ್ತದೆ ಎಂದರೆ ಸರಿ. ವಾದಿಯು ಸರ್ವೇ ನಂ. 24/3 ರಲ್ಲಿ 1 ಎಕರೆ 30 ಗುಂಟೆಗೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತು ವಾದಿಯ ತಾಯಿಗೆ ದಾನವಾಗಿ ಬಂದಿರುವ ಸ್ವತ್ತು ಎಂದರೆ ಸರಿ. ವಾದಿಯು ಸರ್ವೇ ನಂ. 25/5 ರಲ್ಲಿ 2 ಎಕರೆ 17 ಗುಂಟೆಗೆ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಅದು ಸಹ ವಾದಿಯ ತಾಯಿಗೆ ದಾನವಾಗಿ ಬಂದ ಆಸ್ತಿ ಎಂದರೆ ಸರಿ. ವಾದಿಯ ತಾಯಿ ಲಕ್ಷ್ಮಮ್ಮ ನವರಿಗೆ ಅವರ ತಂದೆಯಿಂದ ದಾನವಾಗಿ ಬಂದಿದ್ದು ಲಕ್ಷ್ಮಮ್ಮ ನವರು ಆ ಸ್ವತ್ತನ್ನು ಅನುಭವಿಸುತ್ತಿದ್ದರು ಎಂದರೆ ಸರಿ. ಆ ಸ್ವತ್ತನ್ನು ಸಾವಿತ್ರಮ್ಮ ನವರು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಮಾಣ ಪತ್ರದಲ್ಲಿ ಇರುವ ವಿಚಾರ ತಿಳಿದುಕೊಂಡಿರುತ್ತೇನೆ . ಅದನ್ನು ವಕೀಲರು ಹೇಳಿ ಬರೆಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಜಯಮ್ಮನವರು ಸ್ವಾಧೀನಲ್ಲಿ ಇರುವುದಾಗಿ ತಿಳಿಸಿದ ಜಮೀನು ವಾದಿಯು ದಾವೆ ಸಲ್ಲಿಸಿದ ಸ್ವತ್ತು

ಆಗಿರುವುದಿಲ್ಲ ಎಂದರೆ ಸುಳ್ಳು. ನನ್ನ ಪ್ರಮಾಣ ಪತ್ರದಲ್ಲಿ ಸಣ್ಣ ಕರಿಯಪ್ಪ ಸ್ವಾಧೀನಲ್ಲಿ ಇರುವುದಾಗಿ ತಿಳಿಸಿದ ಜಮೀನು ವಾದಿಯು ದಾವೆ ಸಲ್ಲಿಸಿದ ಸ್ವತ್ತು ಆಗಿರುವುದಿಲ್ಲ ಎಂದರೆ ಸುಳ್ಳು.

ನಿಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿದಂತೆ ಸರ್ವೆ ನಂ.24/5 ರಲ್ಲಿ ಒಟ್ಟು 8 ಎಕರೆ ವಿಸ್ತೀರ್ಣ ಇದ್ದು ಅದರಲ್ಲಿ ಏಕಾಂತಪ್ಪ , ಶೇಖರಪ್ಪ , ಮಲ್ಲಪ್ಪ , ಕರಿಯಪ್ಪ , ನಂಜುಡಪ್ಪ ಇವರುಗಳು ತೆಗೆದುಕೊಂಡಿರುತ್ತಾರೆ ಎಂದು ಹೇಳಲಾದ ಸ್ವತ್ತುಗಳು ವಾದಿಯ ತಾಯಿಗೆ ದಾನವಾಗಿ ಬಂದಿರುವ ಸ್ವತ್ತುಗಳು ಆಗಿದ್ದು ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂದರೆ ಸುಳ್ಳು. ವಾದಿಯ ತಾಯಿ ಲಕ್ಷ್ಮಮ್ಮ ನವರು ದಾವಾ ಸ್ವತ್ತುಗಳನ್ನೂ ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂದರೆ ಸುಳ್ಳು. ನನಗೆ ಏಕಾಂತಪ್ಪ , ಶೇಖರಪ್ಪ , ಮಲ್ಲಪ್ಪ , ಕರಿಯಪ್ಪ , ನಂಜುಡಪ್ಪ ನವರು ಲಕ್ಷ್ಮಮ್ಮನವರಿಗೆ ಸ್ವತ್ತುಗಳನ್ನು ಖರೀದಿ ಮಾಡಿರುವುದಾಗಿ ತಿಳಿಸಿರುತ್ತಾರೆ. ನಾನು ಸದರಿ ಪತ್ರಗಳನ್ನು ನೋಡಿರುತ್ತೇನೆ. ಸದರಿ ಪತ್ರಗಳು 1965 ನೇ ಇಸವಿಯದ್ದಾಗಿರುತ್ತದೆ. ಸದರಿ ಪತ್ರದಲ್ಲಿ ಲಕ್ಷಮ್ಮನವರ ಜಮೀನನ್ನು ಸಣ್ಣ ಕರಿಯಪ್ಪ ನವರಿಗೆ ಮಾರಾಟ ಮಾಡಿರುವುದಾಗಿ ಬರೆದಿರುತ್ತದೆ . ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಂಗವ್ವನಹಳ್ಳಿಯಲ್ಲಿ ಸರ್ವೆ ನಂ. 2 ನನ್ನ ಜಮೀನು ಆಗಿರುತ್ತದೆ. ನಮ್ಮ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ದಾಸಪ್ಪ , ಪಶ್ಚಿಮಕ್ಕೆ ನಂಜುಡಪ್ಪ , ಉತ್ತರಕ್ಕೆ ರಸ್ತೆ , ದಕ್ಷಿಣಕ್ಕೆ ದನವಿನ ಓಣಿ ಅಗಿರುತ್ತದೆ. ಸರ್ವೆ ನಂ.24/3 1 ಎಕರೆ 30 ಗುಂಟೆ , ಪೂರ್ವಕ್ಕೆ ಬಾಗಣ್ಣ ನಾಯಕ , ಪಶ್ಚಿಮಕ್ಕೆ ದಾಸಪ್ಪ , ಉತ್ತರಕ್ಕೆ ಗೋವಿಂದಪ್ಪ , ದಕ್ಷಿಣಕ್ಕೆ ಲಕ್ಷ್ಮಮ್ಮ ಈ ಜಮೀನಿನ ಮದ್ಯ ಇರುವ ಸ್ವತ್ತಿಗೂ ಪ್ರತಿವಾದಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಂಬಂಧ ಇಲ್ಲ ಎಂಬ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ.25/5, 3 ಎಕರೆ 37 ಗುಂಟೆ , ಪೂರ್ವಕ್ಕೆ ದಾಸಪ್ಪ, ಪಶ್ಚಿಮಕ್ಕೆ ಸಿದ್ದಪ್ಪ , ಉತ್ತರಕ್ಕೆ ಗೋವಿಂದಪ್ಪ , ದಕ್ಷಿಣಕ್ಕೆ ದನವಿನ ಓಣಿ ಈ ಜಮೀನಿನ ಮದ್ಯ

ಇರುವ ಸ್ವತ್ತಿಗೂ ಪ್ರತಿವಾದಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಂಬಂಧ ಇಲ್ಲ ಎಂಬ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ಅಣ್ಣ ತಮ್ಮಂದಿರು ಆಗಿರುವ ಕಾರಣ ದಾವಾ ಸ್ವತ್ತುಗಳನ್ನು ವಾದಿಯ ಅನುಭವಿಸುತ್ತಿರುವ ವಿಚಾರ ತಿಳಿಸಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಎಂದಿಗೂ ದಾವಾ ಸ್ವತ್ತನ್ನು ಅನುಭವಿಸಿಲ್ಲ ಎಂದರೆ ಸರಿಯಲ್ಲ. ವಾದಿಯರೇ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ**
**ನಾಯ್ಯಾಧೀಶರು, ಹೊಸದುರ್ಗ.**